1) ಶಿವಮೊಗ್ಗ ನಗರದಲ್ಲಿ ಇರುವ ದೇವಿ ಶುಗರ್ಸ್ ಪುನರಾರಂಭದ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿದೆಯೇ; (ವಿವರ ನೀಡುವುದು)

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :—

1) ಮೆ: ತುಂಗಭದ್ರಾ ಸಕ್ಕರೆ (ದೇವಿ ಶುಗರ್ಸ್) ಕಾರ್ಖಾನೆಯಿಂದ ಬರಬೇಕಾದ ಬಾಕಿಗಾಗಿ ಚಿನ್ನೈ ಮೂಲದವರು ಚೆನ್ನೈ ಉಚ್ಚ ನ್ಯಾಯಾಲಯದಲ್ಲಿ ತಕರಾರು ಹೂಡಿದ್ದರಿಂದ, ನ್ಯಾಯಾಲಯವು ಸದರಿ ಸಕ್ಕರೆ ಕಾರ್ಖಾನೆಯನ್ನು ಸಮಾಪನಗೊಳಿಸಲು ಹಾಗೂ ಅದರ ಸಮಸ್ತ ವಹಿವಾಟನ್ನು ಚೆನ್ನೈ ಉಚ್ಚ ನ್ಯಾಯಾಲಯದಿಂದ ನೇಮಕಗೊಂಡ ಸಮಾಪನಾಧಿಕಾರಿಯವರ ವಶಕ್ಕೆ ನೀಡಲು ಆದೇಶಿಸಿರುವ ಹಿನ್ನೆಲೆಯಲ್ಲಿ ಸಮಾಪನಾಧಿಕಾರಿಗಳು ಕಾರ್ಖಾನೆಯ ಎಲ್ಲಾ ಆಸ್ತಿಗಳನ್ನು ಅವರ ವಶಕ್ಕೆ ಪಡೆದು ಬೀಗ ಮುದ್ರೆ ಹಾಕಿರುತ್ತಾರೆ.

ಮೆ: ತುಂಗಭದ್ರಾ ಸಕ್ಕರೆ ಕಾರ್ಖಾನೆಯು (ದೇವಿ ಶುಗರ್ಸ್) ಖಾಸಗಿ ಕ್ಷೇತ್ರದ ಕಾರ್ಖಾನೆಯಾಗಿದ್ದು, ಈ ಕಾರ್ಖಾನೆಯನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳಬೇಕೆಂದು ಈ ಹಿಂದೆ ಯೋಚಿಸಿದ್ದ ಪ್ರಸ್ತಾವನೆಯನ್ನು ಮೇಲಿನ ಕಾರಣಕ್ಕಾಗಿ ಕೈಬಿಟ್ಟಿರುತ್ತದೆ. ಆದುದರಿಂದ ಕಾರ್ಖಾನೆಯನ್ನು ಸರ್ಕಾರದ ವತಿಯಿಂದ ಪುನರಾರಂಭಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಮೀನುಗಾರಿಕೆ ರಸ್ತೆಯ ಸುಮ್ಮಸ್ಥೆ.

1227(1194) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) :— ಮಾನ್ಯ ಮೀನುಗಾರಿಕೆ ಬಂದರು ಮತ್ತು ಪ್ರವೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಜಿಲ್ಲಾ ಪಂಚಾಯತ್ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿರುವ ರಸ್ತೆಗಳ ಸುಮ್ಮಸ್ಥೆಯನ್ನು ಕಾಪಾಡಿಕೊಂಡು ಬರುವ ತರಾಗೆ ಮೀನುಗಾರಿಕೆ ರಸ್ತೆ ಬಗ್ಗೆ ಇಲಾಖೆ ಸುಮ್ಮಸ್ಥೆಯನ್ನು ಕಾಪಾಡದೇ ಇರಲು ಕಾರಣವೇನು?

2. ರಸ್ತೆ ನಿರ್ಮಿಸಿದ ನಂತರ ಅದರ ಸುಮ್ಮಸ್ಥೆಯನ್ನು ಇಲಾಖೆ ಮುಂತಾದವರು ಕಾಯ್ದುಕೊಂಡು ಬರುವುದೆ.

3) ಮೀನುಗಾರಿಕಾ ರಸ್ತೆಗಳ ಸುಮ್ಮಸ್ಥೆ ಕಾಪಾಡಲು ನಿಗಧಿತ ಪೊತ್ತವನ್ನು ಕಾಯ್ದಿರಿಸುವ ಪ್ರಸ್ತಾವ ಸರ್ಕಾರದ ಮುಂದೆ ಇದೆಯೇ?

ಶ್ರೀ ಬಿ. ರಮಾನಾಥ ರೈ (ಮೀನುಗಾರಿಕೆ ಬಂದರು ಮತ್ತು ಪ್ರವೇಶಾಭಿವೃದ್ಧಿ ಸಚಿವರು) :—

1) ಸಾಕಷ್ಟು ನಿರ್ವಹಣಾ ಅನುದಾನದ ಲಭ್ಯತೆ ಇಲ್ಲದ ಕಾರಣ.

2) ನಿರ್ವಹಣೆಗೆ ಅನುದಾನದ ಲಭ್ಯತೆಗೆ ಅನುಸಾರವಾಗಿ ಸುಸ್ಥಿತಿಯನ್ನು ಕಾಯ್ದುಕೊಂಡು ಬರಲಾಗುವುದು.

3) ಇಲ್ಲ.

ಮೈಸೂರು ಜಿಲ್ಲೆ ಹಾಗೂ ತಾಲ್ಲೂಕಿನಲ್ಲಿ ಪಶು ಆಸ್ಪತ್ರೆಯ ವಿವರಗಳು.

1228(263) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) :— ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ಜಿಲ್ಲೆ ಹಾಗೂ ತಾಲ್ಲೂಕಿನಲ್ಲಿ ಎಷ್ಟು ಪಶುವೈದ್ಯಕೀಯ ಆಸ್ಪತ್ರೆಗಳಿವೆ?

ಆ) ಜಾನುವಾರು ಸಂಖ್ಯೆಗೆ ಅನುಗುಣವಾಗಿ ಪಶು ವೈದ್ಯಕೀಯ ಆಸ್ಪತ್ರೆಗಳು ಇದೆಯೇ?

ಇ) ಜಾನುವಾರು ಅವಶ್ಯಕತೆಗೆ ಅನುಗುಣವಾಗಿ ಮಾರ್ಚ್ ಅಂದಾಜು ಪತ್ರದಲ್ಲಿ ಅನುದಾನ ನಿಗದಿಪಡಿಸಲಾಗುತ್ತಿದೆಯೇ?

ಈ) ಜಾನುವಾರು ಪ್ರಮಾಣಕ್ಕೆ ಮತ್ತು ಆಸ್ಪತ್ರೆಯ ಹಂಚಿಕೆ ಮತ್ತು ಅವರ ನಿರ್ವಹಣೆ ನಡುವಿನ ತಾರತಮ್ಯ ಹೋಗಲಾಡಿಸಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :—

ಅ) ಮೈಸೂರು ಜಿಲ್ಲೆಯಲ್ಲಿ ಒಟ್ಟು 16 ಪಶು ಆಸ್ಪತ್ರೆಗಳು ಹಾಗೂ ಮೈಸೂರು ತಾಲ್ಲೂಕಿನಲ್ಲಿ ಒಟ್ಟು 6 ಪಶು ಆಸ್ಪತ್ರೆಗಳು ಇವೆ.

ಆ) ಇದೆ.

ಇ) ಇಲಾಖೆಯ ಆಥಿರ್ಕ ಸಂಪನ್ಮೂಲದಿಂದ ಅನುದಾನವನ್ನು ಗರಿಷ್ಠ ಪ್ರಮಾಣದಲ್ಲಿ ನೀಡಲಾಗುತ್ತಿದೆ.

ಈ) ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಹೆಚ್ಚಿನ ಅದ್ಯತೆ ನೀಡುವ ಮೂಲಕ ಜಾನುವಾರುಗಳ ಸಂಖ್ಯೆಗೆ ಅನುಗುಣವಾಗಿ ಆಸ್ಪತ್ರೆಗಳ ಹಂಚಿಕೆ ಮತ್ತು ಅವರ ನಿರ್ವಹಣೆಯನ್ನು ಸಂಸ್ಥೆಗಳನ್ನು ಮೇಲ್ದರ್ಜೆಗೇರಿಸುವ ಮೂಲಕ ಮಾಡಲಾಗುತ್ತಿದೆ.